International Journal of Kannada Research
www.kannadajournal.com

**ISSN: 2454–5813**
IJKR 2020; 6(1): 96-101
© 2020 IJKR
www.kannadajournal.com
Received: 22-11-2019
Accepted: 24-12-2019

**ಗುರುಸ್ವಾಮಿ ಗು ಹಿರೇಮಠ**
ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ
ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ಬೆಳಗಾವಿ.

**ಡಾ.ಗಜಾನನ ನಾಯ್ಕ.**
ಮಾರ್ಗದಶಕರು
ಶಾಸ್ತ್ರೀಯ ಕನ್ನಡ ಭಾಷಾ
ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ಬೆಳಗಾವಿ.

**Corresponding Author:**
**ಗುರುಸ್ವಾಮಿ ಗು ಹಿರೇಮಠ**
ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ
ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ಬೆಳಗಾವಿ.

# ಅನುಭಾವ ಸಂಸ್ಕೃತಿಗೆ ಅಲ್ಲಮಪ್ರಭುವಿನ ಕೊಡುಗ

**ಗುರುಸ್ವಾಮಿ ಗು ಹಿರೇಮಠ, ಡಾ.ಗಜಾನನ ನಾಯ್ಕ.**

ಭಾರತೀಯ ಪ್ರಮುಖ ದಾರ್ಶನಿಕ ಮತ್ತು ಸಾಂಸ್ಕೃತಿಕ ಚಿಂತಕರಲ್ಲಿ ಅಲ್ಲಮಪ್ರಭುವಿನ ಹೆಸರು ಅಪರೂಪದ್ದು. ಲೋಕದೊಳಗಿದ್ದೂ ಲೋಕವಿರೋಧಿಯಂಬಂತಹ ಚಿಂತನೆಗಳ ಮೂಲಕ ಭಾರತೀಯ ದಾರ್ಶನಿಕ ಪರಂಪರೆಯ ಚಿಂತನಾ ಆಯಾಮದ ಮತ್ತೊಂದು ಶ್ರೀಮಂತಿಕೆಯನ್ನು ಅನಾವರಣಗೊಳಿಸಿದ ಅವಿರಳ ಅನುಭಾವಿ. ಅಂತಯೇ 'ಕನ್ನಡ ಸಂಸ್ಕೃತಿಯ ಆಂತರಿಕ ಚೌಕಟ್ಟಿನೊಳಗೇ ಅಲ್ಲಮನನ್ನು ಚರ್ಚಿಸುವ ಸಾಧ್ಯತೆಗೆ ಅಂತರ್ಮುಖೀ ಸಾರ್ಥಕತೆ ಇದೆ. ಆದರೆ ಅದು ಅಲ್ಲಮನನ್ನು ಒಂದು ಬಗೆಯ ಸೀಮಿತ ಆಸ್ವಾಧನೆಗೆ ಮಾತ್ರ ಮಿತಿಗೊಳಿಸುತ್ತದೆ. ಕನ್ನಡ ಸಂಸ್ಕೃತಿ ಎನ್ನುವುದು ರೂಪುಗೊಂಡ ಪ್ರಕ್ರಿಯೇಯಲ್ಲಿಯೇ ಚಾರಿತ್ರಿಕವಾಗಿ ಹಲಬಗೆಯ ಶಕ್ತಿಗಳ, ಕ್ಷೇತ್ರಗಳ, ಸನ್ನಿವೇಶಗಳ ಮುಖಾಮುಖಿಯಿದೆ. ಹೀಗೆ ಸಿದ್ಧವಾದ ಚಾರಿತ್ರಿಕ ಎರಕದಲ್ಲಿ ಮೂಡಿದ ಅಲ್ಲಮ ಲೋಕಕ್ಕೆ ಕನ್ನಡವನ್ನು ಮೀರುವ ಗುಣವಿದೆ ಎಂದರೆ ಕನ್ನಡಿಗನ ಮುಗ್ಧ ಅಭಿಮಾನದ ಮಾತಲ್ಲ.'[1] ಎಂಬ ಹೇಳಿಕೆ ಅತಿಶಯೋಕ್ತಿಯಾಗಲಾರದು. ಅಲ್ಲಮಪ್ರಭು ತನ್ನ ಬದುಕಿನ ಪ್ರಾರಂಭದ ದೆಸೆಯಲ್ಲಿ ಅನುಭವಿಸಿದ ತಳಮಳಗಳು, ಅತೃಪ್ತಿ, ಮುಂತಾದವುಗಳೊಂದಿಗೆ ನಶ್ವರವಾಗುವುದನ್ನು ದಾಟಿ ಶಾಶ್ವತವಾದುದಕ್ಕೆ ಹಂಬಲಿಸಿ ರೂಪುಗೊಂಡವನೆಂಬುದು ಸ್ಪಷ್ಟವಾಗುತ್ತದೆ. ಅಂತೆಯೇ ಆತನು ಜೀವನದಲ್ಲಿ ಪಡೆದುಕೊಂಡ ಅನಿರೀಕ್ಷಿತ, ಆಶ್ಚರ್ಯಕರವಾದ ತಿರುವುಗಳನ್ನು ಮೀರಿದವನು. ತನಗಾದ ಸಂತೋಷಗಳು, ಸುಖ–ದುಃಖ–ಭಯಗಳ ಸ್ವರೂಪವನ್ನು ಅರಿತು ತಾನೆ ತಾನಾದ ಸಾಧಕನಾಗಿ ಬೆಳೆದವನು. ಆಮೂಲಕ ಬಯಲೊಳಗೆ ಬಯಲಾಗುವ ಪರಿಯನ್ನು ಅನುಭಾವಿಸಿದವನು. ಅಂತೆಯೇ ಅಲ್ಲಮನ ವಿಚಾರಗಳು ಮಾನವ ಸಹಜ ಸ್ವಭಾವಗಳನ್ನು ಮೀರಿ ಲೋಕ ವಿಚಾರದಲ್ಲಿ ನಿರಸನ ಸಂಸ್ಕೃತಿಯ ಪ್ರತಿಪಾದಕವೆಂಬಂತೆ ಗ್ರಹಿಸಲಾಗಿದೆ. ಅದನ್ನೇ 'ಅಲ್ಲಮ ನಿರಸನವಾದಿ. ಹಾಗಾಗಿ ಅವನು ಹನ್ನೆರಡನೆಯ ಶತಮಾನದವನು ಮಾತ್ರವಲ್ಲ. ನಿರಸನವಾದಿಗಳು ಆಧುನಿಕೋತ್ತರ ಚಿಂತಕರೇ. ಅವರು ಇತಿಹಾಸವನ್ನು ಸರಳ ರೇಖಾತ್ಮಕವಾಗಿ ಗ್ರಹಿಸುವುದನ್ನು ಅನುಮಾನದಿಂದ ನೋಡುತ್ತಾರೆ. ಅವರ ಪ್ರಕಾರ ಇತಿಹಾಸವೆಂಬುದಕ್ಕೆ ಒಂದು ಗತಿ ಇಲ್ಲ, ಒಂದು ನಿಶ್ಚಿತ ಪಥವಿಲ್ಲ, ವೇಗವಿಲ್ಲ, ಅನೇಕ ಭಿನ್ನ ಪಥಗಳಲ್ಲಿ, ಅನೇಕ ಸಾರಿ ವಿರುದ್ಧ ಪಥಗಳಲ್ಲಿ, ಭಿನ್ನ ಗತಿಗಳಲ್ಲಿ ಇತಿಹಾಸ ಚರಿಸುತ್ತದೆ'.[2]

ಅಂತೆಯೇ ಹೀಗೆಲ್ಲಾ ಪರಿವರ್ತನೆಗೊಂಡು ಸ್ವತಂತ್ರ ಮನೋಧರ್ಮದ ವ್ಯಕ್ತಿಯಾಗಿ ಬೆಳೆದವನು. ಹಾಗಾಗಿ ತಾನು ಸಾಧಿಸ ಹೊರಟ ಮಾರ್ಗದಲ್ಲಿ ಬಂದ ಸಂದೇಹಗಳನ್ನು, ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸಿ ತನ್ನ ಸಾಧನೆಯ ಮಾರ್ಗದಲ್ಲಿ ಪೂರ್ಣತ್ವವನ್ನು ಪಡೆದುಕೊಂಡವನು. ಈ ಪರಿವರ್ತನೆ ಅನಿರೀಕ್ಷಿತ–ಭಾವೋದ್ರೇಕ–ಆವೇಶಗಳ ಫಲವಾಗದೇ ಚೈತನ್ಯಶಕ್ತಿಯ ಸ್ವರೂಪದ್ದಾಗಿದೆ. ಇದುವೇ ಆತನ ಅನುಭಾವದ ಮಾರ್ಗವೆಂಬುದಾಗಿ ಇಲ್ಲಿ ಗುರುತಿಸಿಕೊಳ್ಳಲಾಗಿದೆ. ಅಲ್ಲಮ ಪ್ರಭುವಿನ ವ್ಯಕ್ತಿತ್ವವು ಅಪ್ಪಟ ದೇಶೀಯ ನೆಲೆಯದ್ದು. ಆತ ಬದುಕಿನ ಆದಿ ಮೂಲವನ್ನು ಕಂಡುಕೊಂಡ ಮಹತ್ವದ ಅನುಭಾವಿ, ಚಿಂತನಶೀಲ ಪ್ರವೃತ್ತಿಯ ಪ್ರತಿಭೆ. ಮಧುಕೇಶ್ವರ ದೇವಾಲಯದಲ್ಲಿ ಮದ್ದಳೆಯನ್ನು ನುಡಿಸುತ್ತ ನಾದಲೋಕದಲ್ಲಿ ತನ್ನನ್ನ ರೂಪಿಸಿಕೊಂಡವನು. ಅಲ್ಲಿಂದ ಪ್ರಾರಂಭವಾದ ಆತನ ಬದುಕು ಕಲ್ಯಾಣದಲ್ಲಿ ಮೇರು ಸ್ಥಿತಿಯನ್ನು ತಲುಪಿ ಮಹತ್ವದ ಕಾಲಘಟ್ಟಕ್ಕೆ ಸಾಕ್ಷಿಯಾಗಿದ್ದವನು. ಅಷ್ಟೇ ಅಲ್ಲ ಕ್ರಿಯೆಯಿಲ್ಲದ ತಾತ್ವಿಕತೆಯನ್ನು ಸ್ವೀಕರಿಸದೇ ಅದನ್ನು ಅವನು ಪ್ರಶ್ನಿಸುವ ಮೂಲಕ ಒರೆಗೆ ಹಚ್ಚುವ ಮನೋಭಾವದವನಾಗಿ ಬೆಳೆದವ. ಅವನ ಅನುಭವ, ಅನುಭಾವದ ಸಾಂಸ್ಕೃತಿಕ ನೆಲೆಗಳು ಹುಟ್ಟು ಹಾಕಿದ ಚರ್ಚೆ–ಚಿಂತನೆಗಳಿಗೆ ಅಲ್ಲಮನೆ ಸಾಕ್ಷಿಯೆಂಬಂತೆ ಬೆಳೆದದ್ದು ಸೋಜಿಗವೆನಿಸದಿರಲಾರದು.

ಅಲ್ಲಮಪ್ರಭುಗಳು ತಮ್ಮ ಜೀವನಾನುಭವಗಳೊಂದಿಗೆ ಆಧ್ಯಾತ್ಮಿಕ ಅನುಭವ ಸಮಸ್ತಗಳೊಂದಿಗೆ ಅನುಭಾವದ ಸಾಂಸ್ಕೃತಿಕ ನಿಲುವುಗಳನ್ನು ರೂಢಿಸಿಕೊಂಡವರು. ಅಂತೆಯೇ ಸಾಕಾರ-ನಿರಾಕಾರಗಳ ನಡುವೆ ಲೀಲಾಜಾಲವಾಗಿ ಸಂಚರಿಸುವ ಅಧಮ್ಯ ಚೇತನವಾಗಿ ಬೆಳೆದವರು. ತಮ್ಮ ಅವರ್ಣನೀಯವಾದ ಅನುಭಾವದ ನಿಲುವುಗಳಿಂದಾಗಿ ಮುಖ್ಯರೆನಿಸುವರು. ಹೀಗಾಗಿ ಪ್ರಭುವಿನ ಜೀವನಾನುಭವಗಳ ಲೋಕ ಬಹುವಿಸ್ತಾರವೂ, ಬಹು ಸಂಕೀರ್ಣವೂ ಆಗಿರುವುದು. ಇಂತಹ ಅಲ್ಲಮಪ್ರಭುವಿನ ಅನುಭಾವಿಕ ಸಾಂಸ್ಕೃತಿಕ ನೆಲೆಗಳನ್ನು ಗ್ರಹಿಸುವ ಮುನ್ನ 'ಅನುಭಾವದ ಸಾಂಸ್ಕೃತಿಕ' ವಿಚಾರಗಳ ಕುರಿತಾಗಿನ ಚರ್ಚೆಯ ಇತಿಹಾಸವನ್ನು ಇಲ್ಲಿ ಆಂಶಿಕವಾಗಿ ಗ್ರಹಿಸಿಕೊಳ್ಳಲಾಗಿದೆ.

ಸಾಮಾನ್ಯವಾಗಿ ಭಾರತೀಯ ಹಾಗೂ ಪಾಶ್ಚಿಮಾತ್ಯ ತಾತ್ವಿಕ ಚಿಂತಕರು ಈ ಸಾಂಸ್ಕೃತಿಕ ಅಧ್ಯಯನವನ್ನು ಮಾನವನ ಆಂತರಿಕ ಹಾಗೂ ಆತನ ಬಾಹ್ಯ ನಢಾವಳಿಗಳ ಭಾಗವಾಗಿ ಮತ್ತು ಅವುಗಳ ನಡುವಿನ ಸೂಕ್ಷ್ಮವಾಗಿ ರಚನೆಗೊಂಡಿರುವ ಪರೀಧಿಗಳನ್ನು ಗ್ರಹಿಸಿದವರಾಗಿದ್ದಾರೆ. 'ಅನುಭಾವ ಮತ್ತು ಸಂಸ್ಕೃತಿ' ಎಂಬ ಈ ಪಾರಿಭಾಷಿಕ ಪದಗಳ ಕುರಿತಾಗಿ ವಿಶೇಷವಾಗಿ ಚಿಂತನೆ ಮಾಡಿ ಯೋಗ್ಯ ವಿಚಾರಗಳನ್ನು ವ್ಯಾಖ್ಯಾನಿಸಿದ್ದಾರೆ. ಅವರುಗಳ ಒಟ್ಟು ವ್ಯಾಖ್ಯಾನುಗಳನ್ನು ಆಧರಿಸಿ ನೋಡಲಾಗಿ ಇವುಗಳು ಆಂಗ್ಲಭಾಷೆಯ 'ಒಥಿಣಖಿಛಿಟ' ಮತ್ತು 'ಅಣಟಣಣಡಿಜ' ಪದಗಳಿಗೆ ಸಂವಾದಿಯಾಗಿ ಬಳಕೆಯಾಗುತ್ತಿವೆ. ಮಾನವ ಬದುಕಿನ ಲೌಕಿಕ ಮತ್ತು ಅಲೌಕಿಕ ಪರಿಕಲ್ಪನೆಯ ಒಟ್ಟು ಸ್ತರದ ಬಹು ಮುಖ್ಯವಾದ ಆಚಾರ-ವಿಚಾರಗಳು, ಆಹಾರ-ವಿಹಾರಗಳು, ನಡೆ-ನುಡಿಗಳಿಗೆ ಸಂಬಂಧಿಸಿದ ತಾತ್ವಿಕತೆಯನ್ನು ಕಟ್ಟಿಕೊಡುವ ಪ್ರಯತ್ನಗಳು ದಾರ್ಶನಿಕ ಹಾಗೂ ಸಾಂಸ್ಕೃತಿ ಚಿಂತಕರಿಂದ ನಡೆದಿವೆ. ಲೌಕಿಕ ಬದುಕಿನ ಅನುಭವಗಳು ಅರಿವಿನ ಸ್ಪರ್ಶದೊಂದಿಗೆ ನಿಶ್ಯಬ್ಧದ ಸ್ಥಿತಿಗೇರಿವ ತಾತ್ವಿಕ ಮನೋಸ್ಥಿತಿಯಾಗಿದೆ. ಇಲ್ಲಿ ದೇಹ ಹಾಗೂ ಮನಸ್ಸುಗಳ ವ್ಯಾಪಾರಗಳು ಲಯವಾಗಿ ಐಕ್ಯವಾಗುವ, ನಿರುಪಮದ ನಿಶ್ಚಿಂತ-ನಿಶ್ಚಲವಾದ ಪರಮಾನಂದದ ಅನುಭೂತಿಯನ್ನು ಅನುಭವಸುವುದೆ ಅನುಭಾವ ಸಾಂಸ್ಕೃತಿಯ ಮೂಲ ಉದ್ದೇಶವಾಗಿದೆ. ಈ ಪ್ರಕ್ರೀಯೆ ಒಂದು ಸೋಜಿಗ. ಇಂತಹ ಅನುಭಾವದ ಪರಿಕಲ್ಪನೆಯ ಕುರಿತು ಭಾರತೀಯ ಹಾಗೂ ಪಾಶ್ಚಿಮಾತ್ಯ ವಲಯದ ಚಿಂತಕರು ವಿಭಿನ್ನವಾದ ವ್ಯಾಖ್ಯಾನಗಳನ್ನು ಪ್ರತಿಪಾದಿಸಿದ, ಸೂಕ್ಷ್ಮತೆಗಳೊಂದಿಗೆ ಅಲ್ಲಮಪ್ರಭುವಿನ ಅನುಭವ ಹಾಗೂ ಅನುಭಾವದ ಚಿಂತನೆಗಳನ್ನಿಲ್ಲಿ ರೂಪಿಸಿಕೊಳ್ಳಲಾಗಿದೆ.

ಅನುಭವವು ಮುಖ್ಯವಾಗಿ ಲೌಕಿಕ ಬದುಕಿನ ಸಾಂಸ್ಕೃತಿಕ ನೆಲೆಯಲ್ಲಿ ರೂಪತಳೆಯುತ್ತದೆ. ಕಾಲಾನುಕ್ರಮದಲ್ಲಿ ಅದು ಸಾಮಾನ್ಯ ಇಂದ್ರಿಯ ಜನ್ಯವಾದ ಸುಖ-ದುಃಖ, ನೋವು-ನಲಿವು, ಪ್ರೀತಿ-ದ್ವೇಷ, ಅಸೂಹೆಗಳಿಂದ ರೂಪುಗೊಳ್ಳುತ್ತದೆ. ಇವುಗಳಿಂದ ಬಿಡಿಸಿಕೊಳ್ಳುವ, ಬಿಡಿಸಿಕೊಂಡು ಅನುಭೂತಿಯೊಂದಿಗೆ ಬದುಕಿನ ಜಿಜ್ಞಾಸೆಯ ನೆಲೆಯಿಂದ ರೂಪಿತಗೊಂಡ ಒಂದು ತಾತ್ವಿಕ ವಿಚಾರ ಸರಣಿಯಾಗಿದೆ. ಯಾವುದನ್ನು ಪಾಶ್ಚೀಮಾತ್ಯ ಚಿಂತಕರು **'ಮಿಸ್ಟಿಸಿಸಂ'** ಎಂಬ ಪದದಡಿಯಲ್ಲಿ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆಯೋ ಅದನ್ನು ಭಾರತೀಯ ಚಿಂತಕರು **'ಅನುಭಾವ'** ಎಂಬ ಪದದ ಮೂಲಕ ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ.

ಡಾ.ತಿಪ್ಪೇರುದ್ರಸ್ವಾಮಿಯವರ ಅಭಿಪ್ರಾಯದಂತೆ-'ಅನುಭಾವದ ಆದರ್ಶ ಒಂದೇ ಆಗಿದ್ದರೂ ಅದನ್ನು ಸಾಧಿಸುವ ಒಬ್ಬೊಬ್ಬ ಸಾಧಕನ ಮನೋಭಾವ-ಧರ್ಮ, ಆತನ ಸಂಸ್ಕಾರ ಶಕ್ತಿ, ಪೂರ್ವಸಿದ್ಧತೆಗಳಿಗನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ಸಾಧಕ ತನ್ನ ಈ ಸಂಕುಚಿತ ವ್ಯಕ್ತಿತ್ವವನ್ನು ವಿಶ್ವವ್ಯಕ್ತಿತ್ವದಲ್ಲಿ ಲೀನಗೊಳಿಸುತ್ತಾನೆ. ನಿಜ ಆದರೆ ಆತನೂ ಪ್ರಾರಂಭದಲ್ಲಿ ಒಬ್ಬ ವ್ಯಕ್ತಿಯಾಗಿದ್ದವನು ಕಾಲದೇಶಗಳ ಮಿತಿಯಲ್ಲಿ ಬಾಳಬೇಕಾದವನು. ಈ ವ್ಯಕ್ತಿ ವಿಶಿಷ್ಟತೆಯ ಮತ್ತು ಕಾಲದೇಶಗಳ ಪರಿಣಾಮವೂ ಅನುಭಾವ ಮಾರ್ಗವನ್ನು ರೂಪಿಸುತ್ತದೆ'[3] ಎಂಬುದಾಗಿದೆ.

ಅಲ್ಲಮಪ್ರಭುವಿನ ಅನುಭಾವದ ವಿಚಾರವಾಗಿ 'ಸಾಮಾನ್ಯ ತರ್ಕಕ್ಕೆ ಅತೀತವಾದ ಪ್ರಭುವಿನ ವಿಚಾರ ಶಕ್ತಿಯು ಆತನ ಅನುಭಾವದ ಮೂಲವೂ ಆಗಿರುವುದು. ಇದು ಪ್ರಭುವಿನ ಅನಂತತೆಯ ಮಾರ್ಗವೂ ಆಗಿರುವುದು'.[4] ಎಂಬ ನಿಲುವುಗಳಲ್ಲಿ ಪ್ರಭುವಿನ ಅಂತರಂಗದ ಅನುಭಾವ ಶಕ್ತಿಯಿಂದ ಹೊಮ್ಮಿದ ಸೃಷ್ಟಿ, ಸೃಷ್ಟಿಕರ್ತ, ಮೋಕ್ಷದ ಸ್ವರೂಪವನ್ನು ಕುರಿತ ಸೂಕ್ಷ್ಮವಿವೇಚನೆಗಳು ಸ್ಪಷ್ಟವಾಗಿ ಅನುಭಾವಕ್ಕೆ ತೆರೆದುಕೊಳ್ಳುತ್ತವೆ. ಇನ್ನು ಆತನ ವಚನಗಳು ಅಡಗಿಸಿಕೊಂಡಿರುವ ಅರ್ಥ ಚಮತ್ಕಾರ, ಭಾಷಾಪ್ರಯೋಗ, ಶೈಲಿ, ಲಯ ಮುಂತಾದವುಗಳನ್ನು ಸಂದರ್ಭಕ್ಕನುಸಾರವಾಗಿ ಬಳಸುವ ವಿಶಿಷ್ಠ ತಂತ್ರಗಳ ಮೂಲಕ ತಾನು ಬಯಸುವ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಮಾಡುವಲ್ಲಿ ನಿಷ್ಣಾತ. ಅಲ್ಲಮಪ್ರಭುವಿನ ಅನುಭಾವದ ತೀವ್ರತೆಯು ಉತ್ಕೃಷ್ಠ ಮಟ್ಟದ್ದು. ಅದು ತೆರೆದುಕೊಳ್ಳುವ ಚಮತ್ಕಾರವೇ ವಿಶೇಷವಾದದ್ದು.

ಡಾ.ಮಲ್ಲೇಪುರಂ.ಜಿ.ವೆಂಕಟೇಶ ಅವರು ತಮ್ಮ 'ಅನುಭಾವ;ಒಂದು ತಾತ್ವಿಕ ನೋಟ' ಎಂಬ ಲೇಖನದಲ್ಲಿ 'ಧ್ಯಾನದಿಂದ ಮತ್ತು ಆತ್ಮಾರ್ಪಣಭಾವದಿಂದ ಪರಮಾತ್ಮನಲ್ಲಿ ಸಾಯುಜ್ಯ ಪಡೆಯುವಂತಹ ಮುಮುಕ್ಷವನ್ನು ಮಿಸ್ಟಿಕ್ ಅಥವಾ ಅನುಭಾವಿ ಎಂದು ಕರೆಯುತ್ತೇವೆ. ಬುದ್ಧಿಗೆ ಮೀರಿದಂತಹ ತತ್ವಗಳನ್ನು ಆಧ್ಯಾತ್ಮಿಕವಾಗಿ ಗ್ರಹಿಸಲು ಸಾಧ್ಯವೆಂಬ ನಂಬುಗೆ ಅನುಭಾವಿ ವಾದದ ತಳಹದಿಯಾಗಿದೆ. ಇದನ್ನು ಸಾಧನೆ ಮತ್ತು ಸಿದ್ಧಿಗಳ ನೆಲೆಯಿಂದ ನೋಡಿದರೆ ಆಧ್ಯಾತ್ಮಯೋಗ ಎಂದೂ ಕರೆಯಬಹುದು'[5]ಎಂಬ ವಿಚಾರಗಳ ಮೂಲಕ ಅನುಭಾವದ ಸೂಕ್ಷ್ಮತೆಯನ್ನು ಗುರುತಿಸಿದ್ದಾರೆ. ಇದೊಂದು ವಿಶಿಷ್ಟ ಮನೋ-ಕ್ರಿಯೆಯಾಗಿದ್ದು; ಲೌಕಿಕದ ಅನಂತ ಅನುಭವಗಳಿಂದ ಪ್ರಾರಂಭಗೊಂಡು ರೂಪುಗೊಳ್ಳುವ ಬದುಕಿಗೆ ಅರಿವಿನ ಸ್ಪರ್ಶದೊಂದಿಗೆ ಶೋಧನಗೊಂಡು ದಾರ್ಶನಿಕ ಭಾವವನ್ನು ಪಡೆದುಕೊಳ್ಳುವ ಸ್ಥಿತಿಯಾಗಿದೆ.

ಅಲ್ಲಮಪ್ರಭುವಿನ ಅನುಭಾವ ಮಾರ್ಗವು ಆತನ ಅತೀಂದ್ರಿಯ ತತ್ವದೃಷ್ಠಿಯ ಫಲವಾಗಿದೆ. ಇದರೊಂದಿಗೆ ಆತನ ದೈವತ್ವದ ಕಲ್ಪನೆಯು ಸಾಮಾನ್ಯ ಇಂದ್ರಿಯಗಳ ನೋಟವನ್ನು ಮೀರಿದ, ಒಂದು ಅಂತಃಸ್ಫೂರ್ತಿಯಿಂದ ಪ್ರೇರಿತಗೊಂಡ ಮನೋಧರ್ಮವಾಗಿದೆ. ಅಲ್ಲಮಪ್ರಭುವಿನ ಅನುಭಾವ ಮಾರ್ಗವು ಜ್ಞಾನ ಮತ್ತು ಕರ್ಮವನ್ನು ಮೀರಿದ ನಿಶ್ಚಲ ಶಬ್ಧವಾದುದು. ಸಗುಣ-ನಿರ್ಗುಣ-ನಿರಾಕಾರ ಸ್ಥಿತಿಯವನು. ಒಂದರ್ಥದಲ್ಲಿ ಜೀವನದ ಆಮಿಷೆಗಳಿಗಾಗಿ ಹೋರಾಟದಲ್ಲಿ ತೊಡಗಿದ್ದರೂ ಆ ಬಂಧನಕ್ಕೆ ಅಂಟದೆ ಆತ್ಮನಿಂದ ಆತ್ಮನಲ್ಲಿಯೇ ಲೀನವಾಗುವ ತತ್ವಜಿಜ್ಞಾಸೆ, ದಿವ್ಯದೃಷ್ಠಿಯ ಸಂಬಂಧವನ್ನು ಹೊಂದಿ ಅನುಭಾವಿಯಾದವನು. ಅಂತಯೇ ಆತನು ಬುದ್ಧಿ-ಮನ-ಆಲೋಚನೆಗಳಿಂದ ಅತೀತವಾದ ಆನಂದದ ಸ್ಥಿತಿಯನ್ನು ಅನುಭಾವಿಸಿದವನು. ಹಾಗಾಗಿಯೇ ಅವನ ತತ್ವವು ಕೇವಲ ತಾರ್ಕಿಕ ಹೊರೆಯದ್ದಾಗದೆ ಅನುಭಾವ ಜನ್ಯವಾದುದು. ಅಲ್ಲದೆ 'ಅಲ್ಲಮಪ್ರಭು ಸ್ಥಾಯಿಯಾಗಿದ್ದದ್ದು ಜ್ಞಾನ ಗಿರಿಯ ಉತ್ತುಂಗ ಶಿಖರ ಪ್ರದೇಶದಲ್ಲಿ. ಅಲ್ಲಿಂದ ಅವರು ಲೋಕದ ಸುಖ-ದುಃಖಗಳನ್ನು, ಜನನ-ಮರಣಗಳನ್ನು, ಏಳು-ಬೀಳುಗಳನ್ನು, ಜೀವನ-ಮರಣಗಳನ್ನು ಒಂದು ಮಾತಿನಲ್ಲಿ ಹೇಳುವುದಾದರೆ ಎಲ್ಲ ದ್ವಂದ್ವಗಳನ್ನು ದ್ವಂದ್ವಾತೀತ ನೆಲೆಯಲ್ಲಿ ನಿಂತು ಕಾಣಬಲ್ಲವರಾಗಿದ್ದರು'[6] ಎಂಬುದೇ ಅಲ್ಲಮಪ್ರಭುವಿನ ಅನುಭಾವದ ಮೂಲ ಚಿಂತನೆಯೂ ಆಗಿರುವುದು.

ಅನುಭಾವ ಸಂಸ್ಕೃತಿವೆಂಬುದು ಲೋಕ-ಅಲೌಕಿಕ ವ್ಯವಹಾರಕ್ಕೆ ಮೂಲ ಪಂಚೇಂದ್ರಿಯಗಳು ಮತ್ತು ಜ್ಞಾನೇಂದ್ರಿಯಗಳು. ಇವುಗಳನ್ನು ಬದುಕಿನ ಬಹಿರಂಗ ಮತ್ತು ಅಂತರಂಗದ ಅರಿವುಗಾಗಿ ನಡೆಸುವ ಚಲನಶೀಲ ಹಾಗೂ ಕ್ರಿಯಾತ್ಮಕವಾದ ಸಾಧನೆಗೆ ಇವುಗಳನ್ನು ಬಳಸಿಕೊಳ್ಳುವ ಸಾಧಕನ ಆಯ್ಕೆಯನ್ನು ಆಧರಿಸಿರುತ್ತದೆ. ಇವುಗಳಿಗಿರುವ ಊರ್ಧ್ವ ಮತ್ತು ಅಧೋಮುಖ ಚಲನೆಗಳಿಂದಾಗಿ ಸಾಧಕನನ್ನು ದ್ವಂದ್ವದಲ್ಲಿ ಸಿಲುಕಿಸುವ ಪ್ರಯತ್ನಗಳು ನಡೆಯುತ್ತವೆ. ಹೀಗೆ ನಡೆಯುವ ಮನೋವ್ಯಾಪಾರಗಳ ಕುರಿತಾಗಿ ಮಹತ್ವದ ಚಿಂತನೆಗಳು ನಡೆದಿವೆ. ಇವುಗಳೊಂದಿಗೆ ಆಸಕ್ತಿದಾಯಕವಾದ ಪ್ರಯಾಣವನ್ನು ಮಾಡಿದ ಇದನ್ನೇ 'ಅಂತರಂಗ ಮತ್ತು ಬಹಿರಂಗಗಳ ನಡುವಿನ ವ್ಯತ್ಯಾಸ ಹಾಗೂ ಘರ್ಷಣೆಗಳು ಅನೇಕ ವಚನಕಾರರ ಮುಖ್ಯ ಆಸಕ್ತಿಯಾಗಿದ್ದರೂ ಅಲ್ಲಮ ಇವುಗಳ ದ್ವಂದ್ವವನ್ನು ನಿರಾಕರಿಸಿಕೊಂಡವನಂತೆ ಕಾಣುತ್ತಾನೆ'[7] ಎಂಬಲ್ಲಿ ಆತನ ನಿಲುವುಗಳಲ್ಲಿನ ನಿಕರತೆಯನ್ನು ಹಾಗೂ ಅನುಭಾವದ ಸೂಕ್ಷ್ಮತೆಯನ್ನು ಕಾಣಬಹುದು.

ಅಲ್ಲಮಪ್ರಭುದೇವರು ಬದುಕಿನ ಪ್ರತಿ ಕ್ಷಣಗಳನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿದವರು. ಅದು ಸಾಮಾನ್ಯ, ಸಹಜ ಇಂದ್ರಿಯಗಳನ್ನು ಮೀರಿದ ವಿಚಾರವೆನ್ನುವುದನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ಅದುವೆ ಜಗದ ಸಾಮಾನ್ಯ ನೋಟ ಸಹಜವಾಗಿ ಅಧೋಮುಖ ಚಲನೆಯಾಗುವುದನ್ನು ಹಾಗೂ ಅನುಭಾವಿಯ ನೋಟದ ಮೇಲ್ಚಲನೆಯನ್ನು ಹೀಗೆ ಗುರುತಿಸಿದ್ದಾರೆ.

ನೋಡುವುದ ನೋಡಲರಿಯದೆ ಕೆಟ್ಟಿತ್ತೀ ಲೋಕವೆಲ್ಲ
ನೋಡುವುದ ನೋಡಬಲ್ಲಡೆ ಕೂಡಲಿಲ್ಲ, ಅಗಲಲಿಲ್ಲ;
ನೋಟದ ಕೂಟದ ಅಗಲದ ಸುಖವನು
ಗುಹೇಶ್ವರ ನಿಮ್ಮ ಶರಣ ಬಲ್ಲ.[8]

ಸಹಜವಾಗಿ ಲೋಕ ವ್ಯವಸ್ಥೆಯು ತನಗಾಗುವ ಇಂದ್ರಿಯ ಜನ್ಯ ಅನುಭವಗಳಲ್ಲಿ ಚಕ್ರದಂತೆ ತಿರುಗುವ ಸ್ವಭಾವದಲ್ಲಿಯೇ ನಿರತವಾಗಿರುವುದನ್ನು ಪ್ರಭು ಗುರುತಿಸುತ್ತಾರೆ. ಅರಿವಿನ ಸ್ಪರ್ಷದಿಂದಾಗಿ ತನ್ನೊಳಗಾಗುವ ಅಭೌತಿಕವಾದ ಅಂತರಂಗದ ಅರಿವಿನ ಜ್ಞಾನ ರತ್ನದಿಂದ ಕಂಡುಕೊಳ್ಳಲು ಸಾಧ್ಯ. ಆದರೆ ತನ್ನ ಹಾಗೂ ಅಘೋಚರ ಶಕ್ತಿಯೊಂದಗಿನ ಸಂಬಂಧದ ಮೂಲವನ್ನು ಗ್ರಹಿಸುವ ಮಾರ್ಗವನ್ನು ಕಂಡುಕೊಳ್ಳದೆ ಕೆಡುತ್ತಿರುವುದನ್ನು ಈ ವಚನದ ಪ್ರತಿ ಸಾಲುಗಳು ಧ್ವನಿಸುವುದನ್ನು, ಸೂಕ್ಷ್ಮವಾದ ಅವಲೋಕನದ ಮೂಲಕ ಎಚ್ಚರಿಸುವುದನ್ನು ಇಲ್ಲಿ ಕಾಣಬಂದಿದೆ. ಇಲ್ಲಿಯ 'ನೋಡುವ' ಸ್ಥಲದ ನೆಲೆಯೊಂದಿಗೆ ಇದರ ವಿಸ್ತಾರತೆಯನ್ನು ಕೂಡುವ ಹಾಗೂ ಲೀನವಾಗುವ ಪರಿಯನ್ನು ಹೇಳುವಾಗಿನ ಅಲ್ಲಮಪ್ರಭುವಿನ ಲೋಕದೃಷ್ಟಿಯನ್ನು ಎಂಬುದನ್ನು ಹೇಳುತ್ತಲೇ ನೋಡಿ ಕೂಡಬೇಕಾದ ಅನಂತತೆಯ ಅನುಭೂತಿಯನ್ನು ವ್ಯಕ್ತ ಪಡಿಸಿದ್ದಾರೆ. ಅದರೊಂದಿಗೆ ಆ ಅನಂತ ಶಕ್ತಿಯೊಂದಿಗಿನ ಅವಿನಾಭಾವದ ಸುಖವನ್ನು ಹಾಗೂ ತಾಧ್ಯಾತ್ಮವನ್ನು ಹೊಂದುವ ಬಗೆಯನ್ನೇ ಅಲ್ಲಮಪ್ರಭುವಿನ ಈ ನಿಲುವು ಅನುಭಾವದ ಒಟ್ಟು ಸ್ಥಿತಿಯನ್ನು ವ್ಯಕ್ತಪಡಿಸುವುದು.

ತನುವಿಂಗೆ ತನುವಾಗಿ, ಮನಕ್ಕೆ ಮನವಾಗಿ

ಜೀವಕ್ಕೆ ಜೀವವಾಗಿ ಇದ್ದುದನಾರು ಬಲ್ಲರೋ?
ಅದು ದೂರವೆಂದು, ಸಮೀಪವೆಂದು
ಮಹಾಂತ ಗುಹೇಶ್ವರನೊಳಗೆಂದು ಹೊರಗೆಂದು
ಬಱುಸೂಱೆವೋದರು![9]

ದೇಹ, ಮನಸ್ಸು ಮತ್ತು ಜೀವಾತ್ಮ ವ್ಯವಸ್ಥೆಯು ಸೂಕ್ಷ್ಮತೆಯನ್ನು ತಾಳುವಿಕೆಯ ಮೂಲಕ ಅನಂತದೊಳಗೆ ಲೀನವಾಗುವ ಪರಿಯನ್ನೇ ಅನುಭಾವದ ಅನುಭೂತಿಯಾಗಿ ಗ್ರಹಿಸುವ ಅಲ್ಲಮಪ್ರಭು; ಇದುವರೆಗೆ ಲೋಕ ವ್ಯವಸ್ಥೆಯು ಗ್ರಹಿಸಿರುವ ದ್ವೈತಭಾವವನ್ನು ಅಲ್ಲಗಳೆಯುತ್ತಾರೆ. ಅದನ್ನೇ ತನು-ತನುವಾಗಿ, ಮನ-ಮನವಾಗಿ, ಜೀವ-ಜೀವವಾಗಿ ಹೊಂದಿರುವ ಅಭೇಧ್ಯ ಸ್ಥಿತಿಯನ್ನು ಗುರುತಿಸುವ ಮೂಲಕ ಅಲ್ಲಮಪ್ರಭು ಜೀವಾತ್ಮಗಳು ಪರವಸ್ತುವಿನೊಂದಿಗೆ ತಮ್ಮ ಅಖಂಡತೆಯನ್ನು ಅನುಭಾವಿಸುವುದನ್ನು ಗುರುತಿಸುತ್ತಾರೆ. ಹೀಗೆ ಲೀನವಾಗುವ ಪ್ರಕ್ರಿಯೆಯು ಹಿಂದಿನ ಅನಂತ ಕಾಲದಿಂದ ನಡೆಯುತ್ತಲೇ ಇದೆ. ಅದು ಮುಂದಿನ ಅನಂತಕಾಲದವರೆಗೆ ನಡೆದಿರುತ್ತಲೇ ಇರುವುದನ್ನು ಈ ಮುಂದಿನ ವಚನದಲ್ಲಿಯೂ ವ್ಯಕ್ತಗೊಂಡಿದೆ.

ಹಿಂದೆ ಎಷ್ಟು ಪ್ರಳಯ ಹೋಯಿತ್ತೆಂದರಿಯೆ
ಮುಂದೆ ಎಷ್ಟು ಪ್ರಳಯವಾಗುವುದೆಂದರಿಯೆ
ತನ್ನ ಸ್ಥಿತಿಯ ತಾನರಿದಡೆ ಅದೇ ಪ್ರಳಯವಲ್ಲಾ!
ತನ್ನ ವಚನ ತನಗೆ ಹಗೆಯಾದಡೆ ಅದೇ ಪ್ರಳಯವಲ್ಲಾ!
ಇಂಥ ಪ್ರಳಯ ನಿನ್ನಲ್ಲುಂಟೆ ಗುಹೇಶ್ವರ![10]

'ಪ್ರಳಯ'ವೆಂಬುದು ಪ್ರಕೃತಿಯು ತನ್ನನ್ನು ಬ್ರಹ್ಮಾಂಡದೊಂದಿಗೆ ಲೀನವಾಗಿಸಿಕೊಳ್ಳುವ ಒಂದು ಅಪರೂಪದ ವಿಸ್ಮಯವಾಗಿದೆ. ಆದರೆ ಅಲ್ಲಮಪ್ರಭು ಇದನ್ನೊಂದು ಅನಂತದೊಳಗೆ ನಡೆಯುವ ಸಹಜ ಪ್ರಕ್ರಿಯೇಯಾಗಿ ಗ್ರಹಿಸುವ ಮೂಲಕ ಇದುವರೆಗೆ ನಡೆದ ಇಂತಹ ಪ್ರಕ್ರಿಯೆಗಳನ್ನು ಲೆಕ್ಕ ಇಡಲು ಹೇಗೆ ಸಾಧ್ಯವಾಗಿಲ್ಲವೋ; ಹಾಗೆಯೇ ಮುಂದೆ ನಡೆಯಬಹುದಾದ ಪ್ರಳಯಗಳ ಲೆಕ್ಕವನ್ನೂ ಇಡಲು ಸಾಧ್ಯವೇ? ಎಂಬುದನ್ನು ಪ್ರಶ್ನಿಸುವ ಮೂಲಕ ಇಡೀ ಅನಂತತೆಯ ಸ್ಥಿತಿಯನ್ನು ಗ್ರಹಿಸುತ್ತಾನೆ. ಮಾತ್ರವಲ್ಲ ತನಗೂ ಹಾಗೂ ತನ್ನ ಮೂಲವನ್ನು ಗ್ರಹಿಸುವ ಮೂಲಕ ಐಕ್ಯ ಹೊಂದುವ ಅನುಭಾವದ ಸ್ಥಿತಿಯಾಗಿದೆ. ಅದುವೇ ತನ್ನ ತಾನರಿಯುವುದು, ತನ್ನ ನಡೆ-ನುಡಿಯನ್ನು ಒಂದಾಗಿಸಿಕೊಳ್ಳುವ ಮೂಲಕ ಅನಂತದೊಂದಿಗೆ ಲೀನತ್ವವನ್ನು ಹೊಂದುವುದೇ ಅನುಭಾವವಾಗಿ ಗ್ರಹಿತವಾಗಿದೆ. ಅದುವೇ ಈ ಮುಂದಿನ ವಚನದಲ್ಲಿಯೂ ಇನ್ನೂ ಆಳವಾಗಿ ಗ್ರಹಿತವಾಗಿರುವುದು.

ತನ್ನ ತಾನರಿದಡೆ ನುಡಿಯೆಲ್ಲ ತತ್ವ ನೋಡಾ
ತನ್ನ ತಾ ಮರೆದಡೆ ನುಡಿಯೆಲ್ಲ ಮಾಯೆ ನೋಡಾ!
ಅರಿದು ಮರೆದ ಶಿವಯೋಗಿಯ ಶಬುದವೆಲ್ಲ
ಉಪದೇಶವಲ್ಲದೆ ಭಿನ್ನವುಂಟೆ?

ನಿನ್ನ ಮನದ ಕಳವಳವ ತಿಳುಹಲೆಂದು ಮಾತನಾಡಿಸಿ, ನೋಡಿದಡೆ,
ಎನ್ನ ಮನದೊಳಗೆ ಕಂದು ಕಲೆಯೆಂಬುದಿಲ್ಲ ನೋಡಾ!
ನಮ್ಮ ಗೊಹೇಶ್ವರಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ,
ಬಾಯ್ದೆಗೆದೆನಲ್ಲದೆ, ಭಿನ್ನ ಉಂಟೆ ಹೇಳಾ, ಮರುಳೆ![11]

ಸಾಮಾನ್ಯವಾಗಿ ಎಲ್ಲ ತಿಳುವಳಿಕೆಯ ಹಿಂದೆ ಅಡಗಿರುವ ಭೇದ ಜ್ಞಾನವು ಯಾವಾಗ ಮಾಯವಾಗುವುದೋ ಆಗ ಅನುಭಾವದ ನಿಜ ಸ್ಥಿತಿಗೆ ಸಾಧ್ಯವಾಗುವುದೆಂಬುದು ಅಲ್ಲಮಪ್ರಭುವಿನ ಒಟ್ಟು ಆಶಯವಾಗಿದೆ. ಅದುವೇ ಈ ಮೇಲಿನ ವಚನದಲ್ಲಿ ಕಾಣಬಂದಿದೆ. ಜೀವಾತ್ಮನು ತನ್ನ ನಡೆ-ನುಡಿಯನ್ನು ಅರಿಯುವ ಮೂಲಕ ತನ್ನೊಳೊಗಿನ ಪರತತ್ವವನ್ನು ಅನುಭವಿಸುವುದೇ ಅನುಭಾವ. ಈ ಒಟ್ಟು ಅರಿವಿನ ಸ್ಥಿತಿಯಿಂದಾ ಮರೆತು ಮಾಯಾಭಾವವು ಪ್ರಖರವಾದಾಗ ಮನದ ಮುಂದೆ ಮಸುಕಾಗಿ ತಾನು ಹಾಗೂ

ಪರತತ್ವವು ಭೇದವಾಗಿ ಕಾಣುವ ಮೂಲಕ ದ್ವೈತ ಭಾವಕ್ಕೆ ಕಾರಣವಾಗುವುದು. ಅದು ಅಳಿದು ಸಹಜವಾಗಿರುವ ಅದ್ವೈತಭಾವವು ನೆಲೆಗೊಂಡಾಗ ಅದುವರೆಗಿನ ತಳಮಳಕ್ಕೆ ಕಾರಣವಾಗಿರುವುದರಿಂದ ಬಿಡಿಸಿಕೊಂಡಾಗ ಅಭೇದ ಸ್ಥಿತಿಯು ಸಾಧ್ಯವಾಗುವುದು. ಈ ತತ್ವವನ್ನು ಅರಿತಾಗ ಮಾತ್ರ ಅದೂವರೆಗಿನ ಭಿನ್ನ ಭಾವವು ಅಳಿದು ಹೋಗುತ್ತದೆ. ಆಗ ಪರವಸ್ತುವಿಗೂ ತನಗೂ ಇರುವ ಅನಂತ ಕಾಲದ ಐಕ್ಯತಾಭಾವವು ನೆಲೆಗೊಂಡು ಅಭೇದ ರೂಪವಾಗಿ ನಿಲ್ಲುವ ನಿರ್ಮಲ ಸ್ಥಿತಿಯು ಅನುಭಾವದ ಹಂತವನ್ನು ಅನುಭವಿಸಲು ಸಾಧ್ಯವಾಗುವುದು. ಇಂತಹ ಮುಖ್ಯ ಕಾರ್ಯ–ಕಾರಣಕ್ಕೆ ಕಾರಣವಾಗುವುದನ್ನು ತಿಳಿಸುವ ಅಲ್ಲಮಪ್ರಭು ಇದುವರೆಗಿನ ಭೇದದ ಕುರಿತಾದ ಬಹು ಮುಖ್ಯ ಪ್ರಶ್ನೆಯನ್ನು ಕೇಳಿಕೊಳ್ಳುವರು. ಆ ಮೂಲಕ ತಾನು ಹೇಗೆ ಪರವಸ್ತುವಿನಿಂದ ಭಿನ್ನವಾಗಿರಲು ಸಾಧ್ಯವಿಲ್ಲವೆಂಬುದನ್ನು ಸಿದ್ಧಪಡಿಸುವರು. ಅದನ್ನೇ ಈ ಮುಂದಿನ ವಚನವು ಇನ್ನಷ್ಟು ದೃಢೀಕರಣಗೊಳಿಸುವುದು.

ಆನು ನೀನೆಂಬುದು ತಾನಿಲ್ಲ,
ತಾನರಿದ ಬಳಿಕ ಮತ್ತೇನೂ ಇಲ್ಲ ಇಲ್ಲ,
ಇಲ್ಲದ ಇಲ್ಲವೆಯೆಲ್ಲಿಂದ ಬಪ್ಪುದೋ
ಅನುವನರಿದು ತನುವ ಮರೆದು
ಭಾವರಹಿತ ಗುಹೇಶ್ವರ.[12]

ಅಜ್ಞಾನ, ಭ್ರಮೆ, ಮಾಯಾ ವ್ಯವಸ್ಥೆಯಿಂದಾಗಿ ತನ್ನ ಮೂಲವನ್ನು ಮರೆತ ಕಾರಣವಾಗಿ ತಾನು ಮತ್ತು ಪರಶಕ್ತಿಯ ಮಧ್ಯ ಭೇದಕ್ಕೆ ತಿರುಗಿ ತಾನು ಬೇರೆ ಪರಶಕ್ತಿಯೇ ಬೇರೆ ಎಂಬ ಭಾವವು ಗಟ್ಟಿಗೊಂಡ ಪರಿಣಾಮವಾಗಿ ಜೀವಾತ್ಮವು ಅನುಭಾವದ ಸ್ಥಿತಿಯನ್ನ ಮುಟ್ಟಲು ಸಾಧ್ಯವಾಗದು. ಅಖಂಡ ಬ್ರಹ್ಮಾಂಡವು ಅಣುವಾಗಿ ತನ್ನ ಸೂಕ್ಷ್ಮತೆಯನ್ನು ರೂಪಿಸಿಕೊಳ್ಳುವಾಗ ಅನುವನರಿದು ತನುವ ಮರೆಯು ಮಾರ್ಗವು ಮುಖ್ಯವಾಗುವುದು. ಅದುವೇ ಅನುಭಾವದ ಮಾರ್ಗವನ್ನು ತೆರೆದುಕೊಳ್ಳಲು ಸಾಧ್ಯವಾಗುವುದು. ಆಗ ಈ ಒಟ್ಟು ಅಭೇದ ಪರಿಕಲ್ಪನೆಯು ನೆಲೆಗೊಂಡು ಸೂಕ್ಷ್ಮ ಶಕ್ತಿಯೊಂದಿಗೆ ಬೆರೆಯುವುದೇ ಅನನ್ಯ ಸ್ಥಿತಿಯಾಗಿದೆ ಎಂಬುದನ್ನು ಈ ವಚನವು ವ್ಯಕ್ತಪಡಿಸುವುದು. ಆದರೆ ತನ್ನ ತಾನರಿವುದು ಸಹಜವಾದ ಪ್ರಕ್ರಿಯೆಯಲ್ಲ ಅದೊಂದು ಅನಂತ ಶಕ್ತಿಯೊಂದಿಗಿನ ಲೀನವಾಗುವ ಕಾರ್ಯವು ಅಷ್ಟು ಸುಲಭದಲ್ಲಿ ನೆಲೆಗೊಳ್ಳುವುದು ಅಸಾಧ್ಯವಾದುದು ಅದನ್ನೇ ಈ ಮುಂದಿನ ವಚನವು ನಿರ್ದೇಸಿಸುವುದು.

ಅಜಿವು ಅಜಿವೆನುವೆನುತ್ತಿಪ್ಪಿರಿ ಅಜಿವು ಸಾಮಾನ್ಯವೆ?
ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನಜಿಯಬಾರದು.
ಮುಂದಣ ಹೆಜ್ಜೆಯಳಿದಲ್ಲದೆ, ಒಂದು ಪಾದ ನೆಲೆಗೊಳ್ಳದು.
ನೆಲನ ಬಿಟ್ಟು, ಆಕಾಶದಲ್ಲಿ ನಿಂದು,
ಮುಗಿಲೊಳಗೆ ಮಿಂಚಿಲ್ಲದೆ ತಾನಾಗಬಾರದು
ಗುಹೇಶ್ವರನೆಂಬುದು ಬಜಿದೆ ಬಹುದೆ, ಹೇಳಿರೆ?[13]

ಅಲ್ಲಮಪ್ರಭು ಕೇಳಿಕೊಳ್ಳುವ ಈ ಅರಿವು ಸಹಜವಾಗಿ ನೆಲೆಗೊಳ್ಳದೆಂಬುದು ಮೇಲು ಮಾತಿನಲ್ಲಿಯೇ ವ್ಯಕ್ತವಾಗಿದೆ. ಹಾಗಾದರೆ ಸಾಮಾನ್ಯನಲ್ಲಿ ಅರಿವು ಅಳಗೊಂಡು ಮಾಹಾದೇವನಾಗುವ ಪರಿ ಎಂತು? ಎಂಬುದಕ್ಕೆ ಉತ್ತರವಾಗಿ ಅಲ್ಲಮಪ್ರಭು ನೀಡುವ ಉತ್ತರವೂ ಅಷ್ಟೇ ಮಹತ್ವದ್ದಾಗಿ ಇಲ್ಲಿ ಮೂಡಿ ಬಂದಿರುವುದು. ಇಲ್ಲಿನ ಹಿಂದನ ಹೆಜ್ಜೆಯ ಜೀವಾತ್ಮವು ಜನ್ಮ ತಳೆವಾಗಿನ ಮೂಲಸ್ಥಿಯನ್ನು ತಿಳಿಸುವ ಪ್ರಯತ್ನವು ಹಾಗೂ ಪರವಸ್ತುವಿನೊಂದಿಗಿನ ಸಂಬಂಧವನ್ನು ಅರಿಯಲು ಆತ್ಮದ ಅರಿವು ಮುಖ್ಯವಾಗಿರುವುದನ್ನು ಪ್ರಮುಖವಾಗಿ ನಿರ್ದೇಸಿಸುವುದು. ಇದೆಲ್ಲಾ ನಡೆದು ಹೋಗುವುದು ಮತ್ತು ಪರಾಶಕ್ತಿಯೊಂದಿಗೆ ಲೀನವಾಗುವ ಈ ಪ್ರಕ್ರಿಯೇಯು ನಿರಂತರ ನಡೆಯುವ ಒಂದು ಸೋಜಿಗವಾಗಿದೆ ಎಂಬುದನ್ನು ಅಲ್ಲಮಪ್ರಭು ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ. ಗುಹೇಶ್ವರನೆಂಬ ಪರಶಕ್ತಿಯು ಜೀವಾತ್ಮನಿಗೆ ಮೂರೂ ಕಾಲಸಂದರ್ಭಗಳಾದ ಭೂತ–ವರ್ತಮಾನ–ಭವಿಷ್ಯತ್ ಎಂಬಿ ಸಾಕ್ಷಿ ಸೂಚಕಗಳನ್ನು ಅರಿವುಗೆ ತಂದು ನಿಜದ ನೆಲೆಯನ್ನು ಗ್ರಹಿಸುವ ಪ್ರಯತ್ನದ ಅನಿವಾರ್ಯತೆಯನ್ನು ತಿಳಿಯಪಡಿಸುವ ಅಲ್ಲಮನ ಈ ತತ್ವವು ದ್ವೈತಭಾವವು ಕಾಲದ ಪರೀಧಿಗೆ ಆವರಿಸಿಕೊಂಡ ಪರಿಣಾಮವಾಗಿ ತನ್ನ ಮೂಲವಾಗಿರುವ ಅದ್ವೈತಭಾವವನ್ನು ಮರೆತ ಕಾರಣವಾಗಿ ಅದು ಅರಿವಿಗೆ ಬರುವಲ್ಲಿ ಪಡುವ ಪಾಡನ್ನು ಪ್ರಭು ಎಚ್ಚರಿಸುವಂತೆ ವಚನ ಮೂಡಿಬಂದಿರುವುದು. ಈ ಹೇಳಿಕೆಯನ್ನು ಇನ್ನೂ ವಿಸ್ತರಿಸುವಂತೆ ಮುಂದಿನ ವಿಚಾರವು ಪೂರಕವಾಗಿ ಮೂಡಿಬಂದಿರುವುದನ್ನು ಕಾಣಬಹುದಾಗಿದೆ.
ಸಾಮಾನ್ಯ ಗ್ರಹಿಕೆಗೆ ನಿಲುಕದೇ ಅನೇಕ ಸಂಗತಿಗಳು ಪ್ರಕೃತಿಯಲ್ಲಿ ಸದಾ ನಡೆಯುತ್ತಿರುತ್ತವೆ. ಅದನ್ನೇ ಅಜ್ಞಾನ– ಮಾಯೆ ಎಂಬರ್ಥದಲ್ಲಿ ಗ್ರಹಿಸಲಾಗುವುದು. ಇದುವೇ ಪಿಂಡಾಂಡವು ಬ್ರಹ್ಮಾಂಡದ ಅಂಶವಾಗಿರುವುದು ಎಂಬುದು ಅದ್ವೈತಿಗಳ ಮೂಲ ನಂಬಿಕೆಯಾಗಿದೆ. ಈ ಸಿದ್ಧಾಂತವು ನಂಬಿರುವುದನ್ನೇ ಈ ವಚನವು ವ್ಯಕ್ತಗೊಳಿಸುವುದು. ಅಗ್ನಿ ಮತ್ತು ಜಲತತ್ವಗಳು ಸಾಮಾನ್ಯ ತಿಳುವಳಿಕೆಗೆ ಭಿನ್ನವಾಗಿರುವಂತೆ ಭಾಸವಾದರೂ ಅವು ಪರಸ್ಪರ ಒಂದರಲ್ಲಿಯೇ ಲೀನವಾಗಿರುವುದು ಮೇಲ್ನೋಟಕ್ಕೆ ಕಾಣಸಿಗದು. ಅಂತಯೇ ಅಗ್ನಿಯೊಳಗನ ತೇಜಸ್ಸು ಹಾಗೆಯೇ ಬೇರ್ಪಡಿಸಿ ಅನುಭಾವಿಸಲು ಸಾಧ್ಯವಾಗದಂತೆ ಆಂತರೀಕವಾದ ಸಂಬಂಧವನ್ನು ಹೊಂದಿರುವಂತೆ ಆತ್ಮ–ಜೀವಾತ್ಮ–ಪರಮಾತ್ಮವೆಂಬ ಸಂಬಂಧವು ಅನಂತತೆಯೊಂದಿಗಿನ ಲೀನತ್ವವೆ ಆಗಿರುವುದನ್ನು ಅಲ್ಲಮಪ್ರಭು ವ್ಯಕ್ತಪಡಿಸುತ್ತಾರೆ. ಈ ಪ್ರಕ್ರಿಯೇಯು ಬೆಳಕಿನೊಳಗೆ ಕತ್ತಲೆಯು ಅಡಗುವಂತೆ ಬ್ರಹ್ಮದೊಳಗೆ ಆತ್ಮವೂ ಲೀನವಾಗುವುದೇ ಮುಮುಕ್ಷುವಿನ ಸ್ಥಿತಿಯಾಗಿರುವುದು. ಈ ಬೆಳಕು ಕತ್ತಲೆಯಾಟವು ಒಂದು ನಿರಂತರವಾದ ಪ್ರಕ್ರಿಯೆಯಾಗಿದೆ. ಸದಾ ಪುನರಪಿತ್ವವನ್ನು ಪಾಲಿಸಿಕೊಂಡು ನಿರಂತರವಾದ ಸಾಧನೆಯ ಮೂಲಕ ಜೀವಾತ್ಮವು ತನಗೆ ಆವರಿಸಿದ ಜಡತ್ವವನ್ನು ಬಿಡಿಸಿಕೊಂಡು ಪರಮ ಚೈತನ್ಯದೊಂದಿಗೆ ತಪಸ್ಸೋಪಾದಿಯಲ್ಲಿ ಕಾದು ಅನಂತದೊಳಗೆ ಲೀನವಾಗುವುದೇ ಅಲ್ಲಮಪ್ರಭುವಿನ ಅನುಭಾವ ಪಥದ ಆಶಯವಾಗಿರುವುದು. ಅದುವೇ ಈ ಮುಂದಿನ ವಚನದಲ್ಲಿ ಸ್ಪಷ್ಟಗೊಂಡಿರುವುದನ್ನು ಕಾಣಬಹುದು.

ಮನವೆ ಲಿಂಗವಾದ ಬಳಿಕ ನೆನೆವುದಿನ್ನಾರನಯ್ಯ?
ಭಾವವೆ ಐಕ್ಯವಾದ ಬಳಿಕ ಬಯಸುವುದಿನ್ನಾರನು?
ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ ಅರಿವುದಿನ್ನಾರನು ಗುಹೇಶ್ವರ?[14]

ತನು–ಮನ–ಪ್ರಾಣ–ಭಾವವು ನಿರಂತರವಾದ ಸಾಧನೆಯ ಮೂಲಕವಾಗಿ ತನ್ನೊಳಗಣ ಭೇದವನ್ನು ನಿರಂತರವಾಗಿ ಪಟ್ಟ ಪ್ರಯತ್ನದ ಫಲವಾಗಿ ಕಳಚಿಕೊಂಡು ಜೀವಾತ್ಮವು ತನ್ನನ್ನು ಪರಮ ಚೈತನ್ಯದೊಂದಿಗೆ ಲೀನವಾಗಿಸಿಕೊಂಡಾಗ ಅಭೇದ ರೂಪತೆಯನ್ನು ಪಡೆದುಕೊಳ್ಳುತ್ತದೆ. ಆಗ ಮನವೇ ಅರಿವಿನ ಸಂಕೇತವಾಗುವುದು. ಭಾವವೇ ಬಯಲಾಗುವುದು. ಭೇದದ ಭ್ರಮೆ ಅಳಿದಾಗ ಉಳಿಯುವ ಅರಿವೇ ಗುರುವಾದ ಬಳಿಕ ನಿಜವು ಸಹಜವಾಗಿ

ಅಳವಡುವ ಕಾರಣ ಪರಮ ಚೈತನ್ಯವೇ ತಾನಾಗುವುದರಿಂದ ಇಲ್ಲಿ ಸಹಜವಾದ ಐಕ್ಯ ಭಾವವು ನೆಲೆಗೊಳ್ಳುವುದು.

ಕರ್ಪೂರದ ಗಿರಿಯ ಉರಿಯು ಹಿಡಿದಡೆ ಇದ್ದಿಲುಂಟೆ?
ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೆ?
ಕೆಂಡದ ಗಿರಿಯನರಗಿನ ಬಾಣದಲೆಚ್ಚಡೆ ಮರಳಿ ಬಾಣವನರಸಲುಂಟೇ?
ಗುಹೇಶ್ವರನೆಂಬ ಲಿಂಗವನರಿದು ಮರಳಿ ನೆನೆಯಲುಂಟೆ?[15]

ಇಲ್ಲಿ ಪ್ರಸ್ತಾಪವಾಗಿರುವ ವಿಚಾರವು ಅಲ್ಲಮಪ್ರಭುವಿನ ಒಟ್ಟು ಧೋರಣೆಯನ್ನು ವ್ಯಕ್ತಪಡಿಸುವಂತಿದೆ. ಬಹು ಮುಖ್ಯವಾಗಿ ಅನುಭಾವದ ಅಂತಮವಾದ ತಿಳುವಳಿಯಾಗಿರುವ ತನ್ನನ್ನು ತಾನು ಅರಿತ ಮೇಲೆ ತಾನೆಂಬುದೂ ಮಾಯವಾಗುವುದು. ಹೇಗೆ ಕರ್ಪೂರದ ಇಡಿಯಾದ ಅಸ್ತಿತ್ವವೇ ಉರಿದುಕೊಂಡಾಗಿನ ಸ್ಥಿತಿಯಂತೆ, ಮಂಜಿನ ಪರ್ವತಕ್ಕೆ ಬಿಸಿಲಿನ ಕಳಸವಿಟ್ಟಂತೆ, ಉರಿಯುತ್ತಿರುವ ಕೆಂಡದ ಪರ್ವತಕ್ಕೆ ಅರಗಿನ ಬಾಣದಿಂದ ಹೊಡೆದ ಹಾಗೆ ತನ್ನ ತಾನರಿಯುವ ಅಪರೂಪದ ಕ್ಷಣವೇ ಅನುಭಾವದ ಅಂತಿಮ ಕ್ಷಣವಾಗಿರುವುದು ವ್ಯಕ್ತಗೊಂಡಿದೆ. ಇಲ್ಲಿನ ಕರ್ಪೂರ, ಮಂಜು, ಅರಗು ಈ ಒಟ್ಟು ವಸ್ತುಗಳು ತಮ್ಮನ್ನು ತಾವು ಉರಿಸಿಕೊಂಡು ಕರಗಿ ಮಾಯವಾಗುವ ಒಟ್ಟು ಪ್ರಕ್ರಿಯೇಯಂತೆ ದೇಹ–ಜೀವಾತ್ಮವು ಪರಮಾತ್ಮನೊಂದಿಗೆ ಲೀನವಾಗುವ ಅರಿವಿನ ಸ್ಥಿತಿಯಾಗಿದೆ.

ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು
ಅರಿವು ಮರೆಯಿತ್ತು, ಕುರುಹುಗೆಟ್ಟಿತ್ತು
ಗತಿಯನರಸಲುಂಟೆ? ಮತಿಯನರಸಲುಂಟೆ?
ಅಂಗವೆಲ್ಲಾ ನಷ್ಟವಾಗಿ, ಲಿಂಗಲೀಯವಾಯಿತ್ತು
ಕಂಗಳಂಗದ ಕಳೆಯ ಬೆಳಗಿನ ಭಂಗ ಹಿಂಗಿತ್ತು ಗುಹೇಶ್ವರ.[16]

ಸಾಮಾನ್ಯವಾಗಿ ಜ್ಞಾನ, ತಿಳುವಳಿಕೆ, ಅರಿವು, ಗತಿ, ಮತಿ, ಕುರುಹುಗಳ ಜಾಲದೊಳಗೆ ಮನಸ್ಸು ಸದಾ ಊರ್ಧ್ವ ಹಾಗೂ ಅಧೋಮುಖವಾಗಿ ಚರಿಸುತ್ತಿರುತ್ತದೆ. ಅನುಭಾವಿಯಾದವನು ಹೀಗೆ ಚರಿಸುವ ಪ್ರಕ್ರಿಯೇಯಿಂದ ಬಿಡಿಸಿಕೊಂಡು ಇದಕ್ಕೆಲ್ಲಾ ಕಾರಣವಾದ ಅಂಗವ್ಯವಸ್ಥೆಯನ್ನು ಲಿಂಗವ್ಯವಸ್ಥೆಯಾಗಿಸಿಕೊಂಡು ಈ ದ್ವೈತಭಾವದಿಂದ ಬಿಡಿಸಿಕೊಂಡು ಅದ್ವೈತ ಭಾವದಲ್ಲಿ ಲೀನವಾಗಿ ರಮಿಸುವ ಅನಂತಭಾವವನ್ನ ಅನುಭವಿಸುವುದಾಗಿದೆ. ಅದುವೇ ಈ ಮುಂದಿನ ವಚನದಲ್ಲಿ ಸ್ಪಷ್ಟಗೊಂಡಿದೆ.

ಅಂಗ ಅನಂಗವೆಂಬೆರಡೂ ಅಳಿದು,
ನಿಜದಲ್ಲಿ ನಿಂದ ಲಿಂಗೈಕ್ಯನ ಅಂಗದಲುಳ್ಳ
ಕ್ರೀಗಳೆಲ್ಲವೂ ಲಿಂಗಕ್ರೀಗಳು ನೋಡಾ,
ಮನೋಲಯವಾಗಿಪ್ಪ ನಿಜಲಿಂಗೈಕ್ಯನ ಅನುಭಾವವೆಲ್ಲವೂ
ಜ್ಞಾನ ನಷ್ಟಶಬ್ದ ನೋಡಾ,
ತನ್ನಲ್ಲಿ ತಾನು ತದ್ಗತವಾಗಿಪ್ಪ ಶಿವಯೋಗಿಗೆ
ಭಿನ್ನವಿಲ್ಲ ನೋಡಾ, ಗೊಹೇಶ್ವರ ಸಾಕ್ಷಿಯಾಗಿ.[17]

ಅಲ್ಲಮಪ್ರಭುವಿನ ಅನುಭಾವದ ಸೂಕ್ಷ್ಮತೆಯು ಭೇದ–ಅಭೇದದ ನೆಲೆಯನ್ನು ದಾಟಿ ನಿಲ್ಲುವ ಒಂದು ಅನಂತತೆಯ ಸ್ಥಿತಿಯಾಗಿದೆ. ತನು–ಮನ–ಪ್ರಾಣ–ಅರಿವುಗಳು, ಅಂಗ–ಅನಂಗದ ಕ್ರಿಯಾಧಿಗಳ ಭೇದವನ್ನಳಿಯುವ ಮನೋವ್ಯಾಪಾರವು ಲಯವಾಗಿ ಅಂತಿಮವಾಗಿ ಅನಂತದೊಳಗೆ ಲೀನವಾದಾಗ ಅಲ್ಲಿ ಇರುವ, ಇಲ್ಲದಿರುವ ಜ್ಞಾನವೂ ಮರೆಯಾಗುವಂತಾದಾಗ ಪರಾಶಕ್ತಿಯೊಂದೆ ಸಾಕ್ಷಿಯಾಗುವುದು. ಅದುವೇ ಕಾರಣವಾಗಿ ಈ ವ್ಯವಸ್ಥೆಯಲ್ಲಿ ಬಂದು ಹೋದವರ ಲೆಕ್ಕದ ಸಾಕ್ಷಿಯು ಇಲ್ಲದೆ ಇರುವುದು ಸೋಜಿಗವೆನಿಸದಿರದು. ಅದನ್ನೇ ಈ ಮುಂದಿನ ವಚನವು ವ್ಯಕ್ತಗೊಳಿಸುವುದು.

ಒತ್ತಿ ಹಣ್ಣ ಮಾಡಿದರೆ ಅದೆತ್ತಣ ರುಚಿಯಪ್ಪುದೊ
ಕಾಮಿಸಿ ಕಲ್ಪಿಸಿ ಭಾವಿಸಿದೆಡೆ ಅದೆ ಭಂಗ
ಭಾವಿಸುವ ಭಾವನೆಗಿಂತ
ಸಾವುದೆ ಲೇಸು ಕಾಣಾ ಗುಹೇಶ್ವರಾ.[18]

ಅನುಭಾವ ಸಂಸ್ಕೃತಿಯು ವಿಚಾರಶಕ್ತಿಯಿಂದ ರೂಪುಗೊಳ್ಳುವುದಾದರೂ ಅದು ಸಾಮಾನ್ಯ ತರ್ಕಕ್ಕೆ ಅತೀತವಾದ ಕಾರಣ 'ಒತ್ತಿ ಹಣ್ಣ ಮಾಡಿದರೆ ಅದೆತ್ತಣ ರುಚಿಯಪ್ಪುದೊ'ಎಂಬಲ್ಲಿಗೆ ಬಂದು ನಿಲ್ಲಿವುದು. ಬುದ್ಧಿ ತರ್ಕಗಳಿಗೆ ಮೀರಿದ ಈ ಸತ್ಯ ಸಾಕ್ಷಾತ್ಕಾರವು ಭಾವಿಸುವ ಭಾವನೆಗಳಿಗಿಂತ ಅನಂತವಾದದು ಎಂಬಲ್ಲಿಗೆ ಅಲ್ಲಮಪ್ರಭುವಿನ ಅನುಭಾವ ಸಂಸ್ಕೃತಿಯ ವಿಚಾರವು ಬಂದು ನಿಲ್ಲುವುದು. ಮಾತು ಅಲ್ಲಿ ಮೌನವಾಗಿ ಪರಿಣಮಿಸುವುದು. ಮಾತು ಮನಂಗಳಿಂದ ಅತ್ತತ್ತ ಇರುವ ಜ್ಯೋತಿಯದು. ಅದನ್ನು ಮಾತಿನ ಮೂಲಕವಾಗಿ ಅದರ ನಿಲುವನ್ನು ವ್ಯಕ್ತಗೊಳಿಸದ ಒಂದು ಅನುಭೂತಿಯಾಗಿದೆ.
ಹೀಗೆ ಅಲ್ಲಮಪ್ರಭುವೆಂಬ ಈ ಅನರ್ಘ್ಯ ಅನುಭಾವಿಯ ಸಾಂಸ್ಕೃತಿಕ ವಿಚಾರಗಳಿಂದ ಆತನ ಜೀವನವೇ ಒಂದು ಬಯಲ ರೂಪಕವಾಗಿ ಗೋಚರವಾಗುವುದು. ಅದನ್ನೇ ಡಾ.ತಿಪ್ಪೇರದ್ರಸ್ವಾಮಿಯವರು 'ಅಂತರಂಗದಲ್ಲಿರುವ ಶಕ್ತಿಗಳನ್ನು ಎಚ್ಚರಗೊಳಿಸಿ, ಆ ಎಚ್ಚರದಿಂದ ತೆರದ ಒಳಗಣ್ಣಿನಿಂದ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ಸಾಕ್ಷಾತ್ಕರಿಸಿಕೊಳ್ಳುವುದನ್ನು ಅನುಭಾವವೆಂದು, ಇದು ಕೇವಲ ಬುದ್ಧಿ ಮನಗಳಿಗೆ ನಿಲುಕದೆ ಅವುಗಳನ್ನು ದಾಟಿದ 'ಅಂತಸ್ಫುರಣ'ದಿಂದ ಅನುಭೂತವಾಗುತ್ತದೆ'.[19]ಎಂಬ ವಿಚಾರವು ನೀಡುವ ವಿಭಿನ್ನವಾದ ವ್ಯಾಖ್ಯಾನಗಳು ಅಲ್ಲಮಪ್ರಭುವಿನ ಅನುಭಾವ ಸಂಸ್ಕೃತಿಯನ್ನು ಕಟ್ಟಿಕೊಳ್ಳುವಲ್ಲಿ ಅನಂತ ಹೊಳಹುಗಳಾಗಿ ಗೋಚರಿಸುತ್ತವೆ.

**ಅಡಿ ಟಿಪ್ಪಣೆಗಳು**

1. ಡಾ.ಡಿ.ಆರ್.ನಾಗರಾಜ–ಅಲ್ಲಮಪ್ರಭು ಮತ್ತು ಶೈವಪ್ರತಭೆ–ಪು.ಸಂ–45.
2. ಡಾ.ಎಸ್.ನಟರಾಜ ಬೂದಾಳು–ಪ್ರತ್ಯೇಕ ಬುದ್ಧ ಅಲ್ಲಮಪ್ರಭು–ಪು.ಸಂ–43.
3. ಶರಣರ ಅನುಭಾವ ಸಾಹಿತ್ಯ–ಡಾ.ತಿಪ್ಪೇರುದ್ರಸ್ವಾಮಿ.ಪು.ಸಂ–171.
4. ಶರಣರ ಅನುಭಾವ ಸಾಹಿತ್ಯ–ಡಾ.ತಿಪ್ಪೇರುದ್ರಸ್ವಾಮಿ.ಪು.ಸಂ–77.
5. ವೀರಶೈವ ಧರ್ಮದರ್ಶನ–ಸಂಪುಟ–1, ಜೆ.ಎಸ್. ಎಸ್. ಗ್ರಂಥಮಾಲೆ ಮೈಸೂರು.
6. ಪ್ರೊ; ಪ್ರಭುಶಂಕರ–ಕೃತಿಶೀಲ–ಪು.ಸಂ–151.
7. ಪ್ರೊ:ಓ.ಎಲ್.ಎನ್.–ಅಲ್ಲಮಪ್ರಭು(ಸಂ) ಡಾ.ವಿ.ಚಂ.ನಂಗಲಿ–ಪು.ಸಂ–15.
8. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–585. ಪು.ಸಂ–128.
9. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–

155. ಪು.ಸಂ–36.
10. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–655. ಪು.ಸಂ–144.
11. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–952 ಪು.ಸಂ–214.
12. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–305. ಪು.ಸಂ–69.
13. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–476. ಪು.ಸಂ–105.
14. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–421. ಪು.ಸಂ–94.
15. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–683. ಪು.ಸಂ–149.
16. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–298. ಪು.ಸಂ–68.
17. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ–955. ಪು.ಸಂ–214.
18. ಅಲ್ಲಮನ ವಚನ ಚಂದ್ರಿಕೆ–ಡಾ.ಎಲ್.ಬಸವರಾಜು. ವ.ಸಂ.646. ಪು.ಸಂ–140.
19. ಶರಣರ ಅನುಭಾವ ಸಾಹಿತ್ಯ–ಡಾ.ತಿಪ್ಪೇರುದ್ರಸ್ವಾಮಿ.ಪು.ಸಂ–164.